■ ಎಚ್.ಕೆ.ಶರತ್



# ಜೋಡಿ ಚಪ್ಪಲಿ

ಬೆಂಗಳೂರಿಗೆ ಅಷ್ಟೇನೂ ಪರಿಚಿತನಲ್ಲದ ಅವನ ಕೈ ಹಿಡಿದು ರಸ್ತೆ ದಾಟಿಸಿದ ಅವಳು, 'ನೀ ಹಿಂಗೆ ನೋಡ್ತಾ ನಿಂತಿದ್ರೆ ರಸ್ತೆ ದಾಟ್ದಂಗೇನೆ' ಅಂತ ರೇಗಿದಳು. ಇವನಿಗೆ ಬೈಯ್ಯಲು ಸಿಗುವ ಚಿಕ್ಕ ಅವಕಾಶವನ್ನೂ ಮಿಸ್ ಮಾಡಿಕೊಳ್ಳಬಾರದೆಂಬಂತೆ ಅವಳು ಆಗಾಗ ರೇಗುವುದೂ ಇವನು ಅವಳ ಮುಖವನ್ನೊಮ್ಮೆ ನೋಡಿ ನಗುವುದೂ ನಡೆದೇ ಇತ್ತು. ಅಲ್ಲಲ್ಲಿ ಕತ್ತರಿಸಿದಂತಿದ್ದ ಫುಟ್‌ಪಾತಿನ ಮೇಲೆ ಯಾರಿಗೇ ಆದರೂ ಇವರು ಜೋಡಿ ಹಕ್ಕಿಗಳೇ ಎಂಬುದು ಮನದಟ್ಟಾಗುವಂತೆ ವರ್ತಿಸುತ್ತ ನಡೆದುಕೊಂಡು ಹೋಗುತ್ತಿದ್ದವರು, ತಮ್ಮ ಕಣ್ಣಿಗೆ ಬೀಳುವ ಬಟ್ಟೆ ಅಂಗಡಿಗಳತ್ತ ವಿಶೇಷವಾಗಿ ಗಮನ ಹರಿಸುತ್ತಿದ್ದರು. ಎಂದಿನ ಅಭ್ಯಾಸದಂತೆ ಅವಳ ಭೇಟಿಗೆಂದೇ ಬೆಂಗಳೂರಿಗೆ ಬಂದು ಹೋದ ನೆನಪಿಗಾಗಿ ಅವಳಿಗೆ ಏನಾದರೂ ಕೊಡಿಸಬೇಕೆಂದು ಇವನಿಗೂ ಅನಿಸುತ್ತಿತ್ತು. ಹೀಗೆ ಕಂಡ ಒಂದೆರಡು ಅಂಗಡಿಗಳಿಗೆ ಹೋಗಲು ಹೊಂಚು ಹಾಕುವಾಗಲೇ, ಡಿಸೈನರ್ ವೇರ್ ಎಂಬುದು ಕಣ್ಣಿಗೆ ಬಿದ್ದು, ಹಾಗೆ ಹಾಕಿಕೊಂಡವರೆಲ್ಲರೂ ತಮ್ಮ ಕೈಗೆಟುಕದ ಬೆಲೆಯ ಬಟ್ಟೆಗಳನ್ನೇ ತಮ್ಮ ಬಳಿ ಇಟ್ಟುಕೊಂಡಿರುತ್ತಾರೆಂದು ಮುಂದಿಟ್ಟ ಎರಡು ಹೆಜ್ಜೆಗಳನ್ನು ಹಿಂತೆಗೆದು ಮತ್ತೆ ಫುಟ್‌ಪಾತಿಗೆ ಮರಳಿದ್ದರು. ಬಟ್ಟೆ ಅಂಗಡಿಗಳ ನಡುವಿದ್ದ ಚಪ್ಪಲಿ ಅಂಗಡಿಯ ಗಾಜಿನ ಗೋಡೆಗೆ ಅಂಟಿಕೊಂಡಿದ್ದ ಜಾಹಿರಾತಿನಲ್ಲಿದ್ದ flat 50% off ಎಂಬ ಬರಹ ಇವನ ಗಮನ ಸೆಳೆಯಿತು. ಕೂಡಲೇ 'ಚಪ್ಲಿ ತಗೋತೀಯ' ಅಂತ ವಿಚಾರಿಸಿದ. 'ಬಾ ನೋಡೋಣಂತೆ' ಎಂದಳು.

ಒಳ ಹೋದ ನಂತರ flat 50% off ಎಂಬುದು ತಮ್ಮನ್ನೂ ಒಳಗೊಂಡಂತೆ ಬಹುತೇಕ ಯಾರ ಅಭಿರುಚಿಗೂ ಹೊಂದದ ಕೆಲವೇ ಕೆಲವು ಚಪ್ಪಲಿಗಳಿಗಷ್ಟೇ ಅನ್ವಯಿಸುತ್ತದೆ ಎಂಬುದು ಮನದಟ್ಟಾಗಿ ಇಬ್ಬರಿಗೂ ನಿರಾಸೆಯಾಯಿತು. ಆದರೂ ಜೋಡಿಸಿಟ್ಟ ಚಪ್ಪಲಿಗಳ ಮೇಲೆಲ್ಲ ಕಣ್ಣಾಡಿಸುತ್ತ ಹೋದರು. ಹೀಗೆ ನೋಡುವಾಗ ಅದಲು ಬದಲಾಗಿರುವಂತೆ ತೋರುತ್ತಿದ್ದ ಮೂರ್ನಾಲ್ಕು ಜೋಡಿ ಚಪ್ಪಲಿಗಳು ಇವನ ಗಮನಸೆಳೆದವು. 'ಅದ್ಯಾಕೆ ಹಂಗೆ ಯಾವುದ್ರದೋ ಜೊತೆ ಇನ್ಯಾವ್ದನ್ನೋ ಜೋಡಿಸಿಟ್ಟವರಲ್ಲ' ಅಂತ ಪ್ರಶ್ನಿಸಿಯೇ ಬಿಟ್ಟ.

'ಲೋ ಅದು ಈಗಿನ್ ಫ್ಯಾಷನ್ನು ಕಣೋ. ಒಂದು ಕಾಲಿಗೆ ಒಂಥರದ್ದು, ಇನ್ನೊಂದಕ್ಕೆ ಇನ್ನೊಂಥರದ್ದು. ನನ್ ಫ್ರೆಂಡ್ಸೂ ಹಾಗೆಲ್ಲ ಹಾಕೋತಾರಪ್ಪ' ಅಂತಂದಳು. ಜೀನ್ಸು ಟಿ ಶರ್ಟ್‌ಗಳನ್ನು ಅಲ್ಲಲ್ಲಿ ಹರಿದುಕೊಂಡು ಹಾಕಿಕೊಳ್ಳುವುದೂ ಫ್ಯಾಷನ್ ಆಗಿರುವುದು ತಿಳಿದಿದ್ದ ಅವನಿಗೆ, ಹೀಗೆ ಅದಲು ಬದಲು ಜೋಡಿ ಚಪ್ಪಲಿಗಳನ್ನು ತೊಟ್ಟುಕೊಳ್ಳುವುದೂ ಹೊಸ ಫ್ಯಾಷನ್ ಎಂಬುದರ ಅರಿವಿರಲಿಲ್ಲ.

'ಅಯ್ಯೋ... ಜಗತ್ತಲ್ಲಿ ಎಂತೆಂಥ ತಿಕ್ಲುಗಳು ಇರ್ತಾರಪ್ಪ ಅಂತ ಇವನು ಅವಳ ಮುಖ ನೋಡಿ ನಕ್ಕ. ಅವಳು ನಗುವ ಮನಸ್ಸು ಮಾಡಲಿಲ್ಲ. ತನ್ನ ಮನಸ್ಸಿಗೆ ಮುನಿಸು ಬಳಿದುಕೊಂಡವಳೇ 'ನಡಿ ಹೋಗೋಣ' ಅಂತಂದಳು. ಇವಳ್ಯಾಕೆ ಹೀಗಾಡ್ತಿದ್ದಾಳೆ ಅಂತ ತನ್ನ ಮನಸ್ಸಿನಲ್ಲಿಯೇ ಅಂದುಕೊಂಡವನು ಚಪ್ಪಲಿ ಅಂಗಡಿಯಿಂದ ಹೊರ ಬಂದು ಮತ್ತೆ ಫುಟ್ಪಾತಿನ ಮೇಲೆ ನಡೆಯಲಾರಂಭಿಸಿದ ಮೇಲೆ, 'ಯಾಕೆ ಮುದ್ದು ಏನಾಯ್ತೆ? ಯಾಕ್ ಬೇಜಾರ್ ಮಾಡ್ಕೊಂಡಿದ್ಯಾ?' ಎನ್ನುವ ಮೂಲಕ ರಮಿಸಲು ಮುಂದಾದ.

'ಮತ್ತಿನ್ನೇನು... ನೀನು ಆ ಚಪ್ಲಿ ನೋಡಿ ಆಡ್ಕೊಂಡಂಗೆ ಈ ಸಮಾಜ ನಮ್ಮನ್ನ ನೋಡ್ಕೊಂಡು ಆಡ್ಕೊಳುತ್ತೆ. ನಾನು ಎಷ್ಟ್ ಬೇಡ ಬೇಡಾಂದ್ರೂ ನಾವಿಬ್ರೂ ಮದ್ವೆ ಆಗೋಣ ಅಂತೀಯಲ್ಲ, ನೀನೆ ಯೋಚ್ನೆ ಮಾಡು... ಈ ಸಮಾಜದ ಕಣ್ಣಿಗೆ ನಾನು ನೀನು ಆ ಹೊಂದಾಣಿಕೆಯಾಗದ ಅದಲು ಬದಲಾಗಿರುವ ಜೋಡಿ ಚಪ್ಲಿನೇ. ನಾನು ನೀನು ಅಕ್ಕ ಪಕ್ಕ ನಿಂತಿದ್ರೆ ನಮ್ದು ಒಳ್ಳೆ ಜೋಡಿ ಅಂತ ಯಾರಾದ್ರೂ ಅಂತಾರ? ನೀನು ನೋಡುದ್ರೆ ಟೊಮೆಟೊ ಹಣ್ಣಿದ್ದಂಗೆ ಕೆಂಪುಗಿದ್ಯಾ, ನಾನು ಕರ್ಗಿ. ನೀನು ಎಲ್ಲ ಇರೋರ್ ಮನೆಯವ್ನು, ನಾನು ಏನೂ ಇಲ್ದಿರೋ ಭಿಕಾರಿ. ನಿಮ್ದು ಎಲ್ಲಾ ಮುಟ್ಟುಸ್ಕೊಳೋ ಜಾತಿ, ನಂದೂ...' ಅದುವರೆಗೂ ಅವಳದು ಹುಸಿ ಮುನಿಸೆಂದೇ ಭಾವಿಸಿದ್ದ ಅವನು ಇವಳ ಮಾತು ಕೇಳಿದ ಮೇಲೆ ಪೆಚ್ಚು ಮೋರೆ ಹಾಕಿಕೊಂಡ. ಅವಳ ನೋವು ಇವನದೂ ಆಗಿ, ತಾನೇ ನೋಡಿ ಆಡಿಕೊಂಡ ಜೋಡಿ ಚಪ್ಪಲಿಯಲ್ಲಿ ತಾನೂ ಒಂದಾಗಿರುವಂತೆ ಅನಿಸಿತು. ಅವಳ ಹೆಗಲ ಮೇಲೆ ಕೈ ಹಾಕಿ ಕೆನ್ನೆಗಿಳಿಯುತ್ತಿದ್ದ ಕಣ್ಣೀರು ಒರೆಸುವಾಗ ಇವನ ಕಣ್ಣಂಚು ಕೂಡ ತುಂಬಿಕೊಂಡಿದ್ದವು.

'ಬಾ ಮತ್ತೆ ಆ ಅಂಗ್ಡಿಗೆ ಹೋಗೋಣ... ಆ ಚಪ್ಲಿನೇ ತಗಳುವಂತೆ' ಅಂತಂದು ನಗಿಸಲು ಮುಂದಾದ.

'ಬೇಕಿದ್ರೆ ನೀನು ಅಂಥವ್ನ ಹಾಕೊ... ನೀನಲ್ವ ನನ್ನ ಮದ್ವೆ ಆಗ್ಬೇಕು ಅಂತಿರೋನು' ಎಂದು ಅವಳೂ ನಕ್ಕಳು.

■